**ಓ ಎಸ್ ನಂಃ 200-17**
**ಡಿ ಡಬ್ಲ್ಯೂ ಃ 1**

**ದಿಃ 09-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**26.** ವಾದಿ ದಾವಾ ಷೆಡ್ಯೂಲ್ ಆಸ್ತಿ ತಮ್ಮದೆಂದು ಕೇಳಿಕೊಳ್ಳುತ್ತಿದ್ದಾರೆ ಎಂದರೆ ನಿಜ. 2007 ರಲ್ಲಿ ನನ್ನ ತಂದೆಗೆ ಕ್ರಯದ ಕರಾರು ಪತ್ರ ಆಗಿರುತ್ತದೆ 9 3/4 ಗುಂಟೆಯನ್ನು ನಾವು ಕೇಳುತ್ತಿದ್ದೇವೆ ಎಂದರೆ ನಿಜ. ನಾನು 4 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 4 ನೇ ಪ್ರತಿವಾದಿ ದಿನಾಂಕಃ 28-12-2015 ರಂದು ಮತ್ತು 14-12-2015 ರಂದು ಖರೀದಿ ಮಾಡಿದ ಜಮೀನುಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ನಿಜ. ನಾವು ಕೇಳುತ್ತಿರುವ ಜಮೀನಿಗೂ ಮತ್ತು ವಾದಿ ಕೇಳುತ್ತಿರುವ ಜಮೀನಿಗೂ ಸರ್ಕಾರದಿಂದ ಸರ್ವೆಯಾಗಿ ಪೋಡಿಯಾಗಿ ಹದ್ದುಬಸ್ತು ಆಗಿರುವುದಿಲ್ಲ. ವಾದಿ ತಮ್ಮ ವಾದಪತ್ರದಲ್ಲಿ ಮತ್ತು ಪರಿಹಾರದಲ್ಲಿ 4 ನೇ ಪ್ರತಿವಾದಿಗೆ ಸಂಬಂದಿಸಿದ ಮೇಲೆ ಹೇಳಿದ 2 ಕ್ರಯಪತ್ರಗಳನ್ನು ಮತ್ತು ಅದರ ಆಸ್ತಿಗಳ ಬಗ್ಗೆ ಯಾವ ಕಾರಣಕ್ಕಾಗಿ ಹೇಳಿರುತ್ತಾರೆ ನನಗೆ ಗೊತ್ತಿಲ್ಲ ಅದರ ಅವಶ್ಯಕತೆ ನನಗೆ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**